ಅಲ್ಲಿ ಲೇ—ಆಫ್ ಮಾಡುತ್ತಿದ್ದಾರೆ. ಆಡಳಿತವರ್ಗದವರು ಅಲ್ಲಿನ ಕಾರ್ಮಿಕರಿಗೆ ಕಿರುಕುಳ, ತೊಂದರೆ ಕೊಡುತ್ತಿದ್ದಾರೆ. ಆ ಅಂಗವಿಕಲ ಕಾರ್ಮಿಕರೆಲ್ಲಾ ಮೊನ್ನೆ ದಿವಸ ಮೆರವಣಿಗೆಯಲ್ಲಿ ಬಂದು ಮಾನ್ಯ ಮುಖ್ಯಮಂತ್ರಿಗಳಿಗೆ, ಕೈಗಾರಿಕಾ ಮಂತ್ರಿಗಳಿಗೆ, ಮತ್ತು ಕಾರ್ಮಿಕ ಸಚಿವರಿಗೆ ಮನವಿ ಪತ್ರಗಳನ್ನು ಸಲ್ಲಿಸಿದ್ದಾರೆ. ಅಲ್ಲಿ ಕೆಲವರಿಗೆ ಲೇ—ಆಫ್ ಆಗಿದೆ. ಇವರಿಗೆ ಒಳಗಡೆ ಮಾಡುವಂತಹ ಕೆಲಸವನ್ನು ಕೊಡದೆ, ಹೊರಗಡೆ ಕಳುಹಿಸಿ ಕೊಡುತ್ತಿದ್ದಾರೆ. ಆ ಕಾರ್ಮಿಕರ ಹತ್ತಿರ ನಾವು ಮಾತನಾಡುವುದಕ್ಕೂ ಅಲ್ಲಿನ ಆಡಳಿತವರ್ಗದವರು ಬಿಡುತ್ತಿಲ್ಲ. ಕಾರ್ಮಿಕರಿಗೆ ಶೋ—ಕಾಸ್ ನೋಟೀಸ್ ಕೊಡುತ್ತಿದ್ದಾರೆ. ಆ ಕಾರ್ಖಾನೆಯನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳುತ್ತೇವೆಂದು ಹಿಂದೆ ಮಾನ್ಯ ಕೈಗಾರಿಕಾ ಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟಿದ್ದರು. ಇದರ ಬಗ್ಗೆ ಅವರು ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿರುವುದು ನನಗೆ ಕಾಣುತ್ತಿಲ್ಲ. ಅಲ್ಲಿನ ಕಾರ್ಮಿಕರ ಪರಿಸ್ಥಿತಿ ಹದಗೆಡುತ್ತಿದೆ. ಈ ಕಾರ್ಖಾನೆಯನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಹಾಗೂ ಅಲ್ಲಿನ ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಸರಕಾರ ತೀವ್ರವಾದ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ, ಸದರಿ ಅಂಗವಿಕಲ ಸಂಸ್ಥೆಯವರು ನನ್ನ ಹತ್ತಿರ ಬಂದಿದ್ದರು ಅವರು ಒಂದು ಮನವಿಯನ್ನೂ ಕೊಟ್ಟಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತಿದ್ದೇನೆ. ಈ ಕಾರ್ಖಾನೆಯನ್ನು ರಾಜ್ಯ ಸರಕಾರ ವಹಿಸಿಕೊಳ್ಳತಕ್ಕ ಬಗ್ಗೆ ಕಾನೂನು ರೀತಿಯಿಂದ ವಿಚಾರ ಮಾಡಬೇಕಾಗಿದೆ. ಆದರೂ ಈ ಬಗ್ಗೆ ನಾನೂ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವಿರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಎರಡು ವಿಚಾರ ಇದೆ, ಎರಡನ್ನೂ ಎತ್ತಲಿಕ್ಕೆ ಅವಕಾಶ ಕೊಡುತ್ತೀರಾ ?

ಅಧ್ಯಕ್ಷರು.—ಎರಡನೆಯದಕ್ಕೆ ಇನ್ನೊಬ್ಬರು ಇದ್ದಾರಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ ಇನ್ನೊಂದಕ್ಕೂ ನಾನು ಒಬ್ಬನೇ ಕೊಟ್ಟಿರತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇನ್ನೂ ಕೆಲವು ಪೆಂಡಿಂಗ್ ಇದೆ.

ಅಧ್ಯಕ್ಷರು.—ಪೆಂಡಿಂಗ್ ಯಾವುದೂ ಇಲ್ಲ, ಮುಗಿದು ಹೋಯಿತು, ಇದು ನಿನ್ನೆ ದಿವಸದ್ದು.

ಶ್ರೀ ಎಸ್. ಬಂಗಾರಪ್ಪ.—ಒಂದು ವೇಳೆ ಅಪ್ಪಿತಪ್ಪಿ ಏನಾದರೂ ಮತ್ತೊಂದು ಇದ್ದರೂ ಕೂಡ ಅವಕಾಶ ಕೊಡಬೇಕು.

ಅಧ್ಯಕ್ಷರು.—ಒಂದೇ ದಿವಸ ಎರಡಕ್ಕೆ ಅವಕಾಶ ಕೊಟ್ಟಿದ್ದು ಇದೆಯಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ನಾವು ನಿಯಮಾವಳಿ 334ರ ಪ್ರಕಾರ ಪ್ರಶ್ನೆ ಕೊಡುತ್ತೇವೆ, ಅದಕ್ಕೆ ಉತ್ತರ ಕೊಡುವುದು ಯಾವಾಗ ? ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಉತ್ತರ ಕೊಡುವುದಿಲ್ಲ. ಉತ್ತರ ಕೊಟ್ಟರೆ ಅನುಕೂಲ ಆಗುತ್ತದೆ.

ಅಧ್ಯಕ್ಷರು.—ನಾಳೆ ಉತ್ತರ ಕೊಡಿಸೋಣ.

(v) ಬೆಳಗಾಂ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದ ಪ್ರೇಮಾ ಎಂಬವರ ಅನುಮಾನಾಸ್ಪದ ರೀತಿಯ ಮರಣದ ಬಗ್ಗೆ

ಶ್ರೀ ಎಂ. ವಿರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಪ್ರೇಮಾ ಆನಂದ ಕುಮಾರಿ ಎಂಬವರು, ಬೆಳಗಾಂ ಡಿಸ್ಟ್ರಿಕ್ಟ್ ಹಾಸ್ಪಿಟಲ್‌ನಲ್ಲಿ ನರ್ಸ್ ಆಗಿದ್ದರು ಅವರು ದಿನಾಂಕ 4-3-84 ರಂದು ಅನುಮಾನಾಸ್ಪದ ರೀತಿಯಲ್ಲಿ ಮರಣ ಹೊಂದಿದಾರೆ ಎಂದು ಗೊತ್ತಾಗಿದ್ದೆ. ಇದು ಅನೇಕ ಪತ್ರಿಕೆಗಳಲ್ಲಿ ಕೂಡಾ ಬಂದಿದೆ. ಮಾರ್ಚ್ ಒಂದನೇ ತಾರೀಖಿನಂದು, ಅವರು ಅನಸ್ತೇಶಿಯಿನ್ಸ್ ಸ್ಟೇಜನಲ್ಲಿ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದು, 4ನೇ ತಾರೀಖು ಅವರು ಮೃತ ಪಟ್ಟರು ಎಂದು ಡಿಕ್ಲೇರ್ ಮಾಡಿದ್ದಾರೆ ಇದರಲ್ಲಿ ಏನಾಗಿದೆ ಎಂದರೆ ಇವರು ಹಾಸ್ಪಿಟಲ್‌ಗೆ ಅಡ್ಮಿಟ್ ಆಗುವ ಮೊದಲು ಇವರ ಮೇಲೆ ರೇಪ್ ಆಗಿದೆ ಎಂದು ಅನುಮಾನ ಇದೆ. ರೇಪ್ ಆಗಿರುವುದನ್ನು ಹಾಸ್ಪಿಟಲ್ ಅಥಾರಿಟೀಸ್ ಮತ್ತು ಇನ್ನು ಕೆಲವರು ಇದನ್ನ ಸಂಪೂರ್ಣವಾಗಿ ಮರೆಮಾಚಲು ಪ್ರಯತ್ನಿಸಿದ್ದಾರೆ. ಇದಕ್ಕೆ ಯಾರು ಕಾರಣಕರ್ತರಾಗಿದ್ದಾರೆ, ಅವರನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಇದನ್ನು ಕ್ಲೋಸ್ ಮಾಡಿದ್ದಾರೆಂದು ಜನರ ಅಭಿಪ್ರಾಯ ಇದೆ. ಇದರಲ್ಲಿ ಸಾರ್ವತ್ರಿಕವಾಗಿ ಅನುಮಾನ ಬಂದಿದೆ. ಇದರಲ್ಲಿ ಮತ್ತೊಂದು ವಿಷಯ ಎಂದರೆ, ಆಕೆ ಮರಣ ಹೊಂದಿದ ಮೇಲೂ ಸಹ ಆಕೆಯ ಶವವನ್ನು ಹತ್ತಿರದವರಿಗೆ

ಕೊಟ್ಟಿಲ್ಲ. ಬಹಳ ಅವಸರದಿಂದ ಪೋಸ್ಟ್‌ಮಾರ್ಟಮ್ ಎಲ್ಲಾ ಮಾಡಿ ಆಕೆಯ ಅಂತ್ಯಕ್ರಿಯೆಯನ್ನೂ ಸಹ ಹಾಸ್ಪಿಟಲ್ ಅಥಾರಿಟೀಸ್ ಮಾಡಿದ್ದಾರೆ. ಇದು ಎಲ್ಲಾ ನಡೆದಿದೆ. ಈ ಪ್ರೇಮಾ ಆನಂದ ಕುಮಾರಿ ಎನ್ನುವವರು, ಮರಣಹೊಂದುವುದಕ್ಕೆ ಮೊದಲು ಒಂದು ನೋಟ್ ಕೂಡಾ ಬರೆದು ಕಳುಹಿಸಿದ್ದಾರಂತೆ. ಅದನ್ನು ಆಲ್ಲಿರತಕ್ಕಂಥ ಮೇಟ್ರಿನ್ ಸಪ್ರೆಸ್ ಮಾಡಿದ್ದಾರೆಂದು ಅಭಿಪ್ರಾಯ ಬಂದಿದೆ. ಆದುದರಿಂದ ಇದರ ಬಗ್ಗೆ ಸರಿಯಾದ ತನಿಖೆಯಾಗಬೇಕು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಹಾಸ್ಪಿಟಲ್ ಅಥಾರಿಟೀಸ್ ಕೂಡಾ ಸತ್ಯವನ್ನು ಮರೆಮಾಡತಕ್ಕ ಪ್ರಯತ್ನ ಮಾಡಿದ್ದಾರೆ. ಆದುದರಿಂದ ಈ ಬಗ್ಗೆ ಸರಕಾರ ಸಾಮಾನ್ಯ ತನಿಖೆಯನ್ನು ಮಾಡಿದರೆ ಸತ್ಯ ಹೊರಕ್ಕೆ ಬರುವುದಿಲ್ಲ. ಇದರ ಬಗ್ಗೆ ಸೂಕ್ಷ್ಮವಾಗಿ ವಿಚಾರಣೆ ಮ್ಮಾಡಬೇಕಾಗುತ್ತದೆ. ಹಾಗೂ ಆದರ ಒಂದು ರಿಪೋರ್ಟ್ ಕೂಡಾ ಕೊಡ ಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಗೃಹರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ. ಬೆಳಗಾಂ ಸಿವಿಲ್ ಆಸ್ಪತ್ರೆಯಲ್ಲಿ ಕುಮಾರಿ ಪ್ರೇಮ ಆನಂದಕುಮಾರಿ ನರ್ಸಿಂಗ್ ವಿದ್ಯಾರ್ಥಿನಿ, ಈಕೆಯ ಸಂಶಯಾತ್ಮಕ ಸಾವಿನ ಬಗ್ಗೆ ಹೇಳಿಕೆ :—

ಮೇಲ್ಕಂಡ ವಿಷಯದ ಬಗ್ಗೆ ಹಿಡಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಲೇಡಿ ಅಟೆಂಡರ್ ಆಗಿ ಕೆಲಸ ಮಾಡುತ್ತಿರುವ ಶ್ರೀಮತಿ ಪುಷ್ಪಾವತಿ ಎಂಬಾಕೆಯು ಬೆಳಗಾಂ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ರವರಿಗೆ ಒಂದು ಅರ್ಜಿಯನ್ನು ಕಳುಹಿಸಿದಳು. ಅರ್ಜಿಯಲ್ಲಿ 20 ವರ್ಷ ವಯಸ್ಸಿನ ಪ್ರೇಮ ಆನಂದ ಕುಮಾರಿ ಎಂಬ ತನ್ನ ಮಗಳು ಬೆಳಗಾಂ ಸಿವಿಲ್ ಆಸ್ಪತ್ರೆಯಲ್ಲಿ 1981 ರಿಂದ ನರ್ಸಿಂಗ್ ವಿದ್ಯಾರ್ಥಿನಿ ಆಗಿದ್ದಳೆಂದೂ, 2-3-84 ರಂದು ಬೆಳಗಾಂ ಜಿಲ್ಲಾ ಸರ್ಜನ್‌ರವರಿಂದ ತನ್ನ ಮಗಳ ಸ್ಥಿತಿ ಚಿಂತಾಜನಕ ವಾಗಿದೆ ಎಂದೂ ಟೆಲಿಗ್ರಾಂ ಬಂದಿತೆಂದೂ, ಆದೇ ದಿವಸ ಆಕೆಯು ಹಿಡಕಲ್‌ನಿಂದ ಬೆಳಗಾಂಗೆ ಹೋದ ಳೆಂದೂ ಮತ್ತು ಆಲ್ಲಿ ತನ್ನ ಮಗಳು ಹೆಂಗಸರ ವಾರ್ಡಿನಲ್ಲಿ ಪ್ರಜ್ಞಾ ಹೀನ ಸ್ಥಿತಿಯಲ್ಲಿದ್ದುದನ್ನು ತಾನು ನೋಡಿದುದಾಗಿಯೂ ತಿಳಿಸಿದ್ದಾಳೆ. ಮುಂದುವರಿಯುತ್ತಾ ತಾನು ನವಲೂರಿನಲ್ಲಿರುವ ತನ್ನ ಗಂಡ ನಿಗೆ ಈ ಬಗ್ಗೆ ಒಂದು ಟೆಲಿಗ್ರಾಂ ಕಳುಹಿಸಿದುದಾಗಿಯೂ, ಮಾರನೆ ದಿನ ಬೆಳಿಗ್ಗೆ ತಾನು ಮತ್ತು ತನ್ನ ಗಂಡ ಇಬ್ಬರು ಮಗಳ ಕುತ್ತಿಗೆ ಮೇಲೆ 3 ಬೆರಳಿನ ಗುರುತುಗಳನ್ನು ಕಂಡುದಾಗಿಯೂ ತನ್ನ ಮಗಳು 4-3-84ರ ಸಾಯಂಕಾಲ ಮೃತಪಟ್ಟುದಾಗಿಯೂ, ತನ್ನ ಮಾತನ್ನು ಲೆಕ್ಕಿಸದೆ ಡಾಕ್ಟರ್‌ರವರು ಶವ ವವನ್ನು ಶವಾಗಾರಕ್ಕೆ ಕಳುಹಿಸಿದರೆಂದೂ, ತನ್ನ ಮಗನ ಹಸ್ತಾಕ್ಷರವನ್ನು ಪಡೆದು ಶವವನ್ನು ಅವನ ಸುಪರ್ದಿಗೆ ಕೊಟ್ಟರೆಂದೂ, ತಾನು ಇರದಲ್ಲಿ ಯಾರದೋ ಕೈವಾಡ ಇದೆ ಎಂದು ಶಂಕಿಸುವುದಾಗಿಯೂ ಮತ್ತು ಇದರ ಬಗ್ಗೆ ವಿಚಾರಣೆ ಆಗಬೇಕೆಂದೂ ಆಕೆ ಅರ್ಜಿಯಲ್ಲಿ ತಿಳಿಸಿದ್ದಾಳೆ.

2. ಬೆಳಗಾಂ ನಗರ ವೃತ್ತ ಆರಕ್ಷಕ ನಿರೀಕ್ಷಕರಾದ ಶ್ರೀ ಎನ್.ಬಿ. ತೆರಣಿ ಇವರು ಈ ಅರ್ಜಿ ಯಲ್ಲಿ ಕಂಡು ಬಂದ ಅಂಶಗಳ ಬಗ್ಗೆ ಸ್ವತಃ ಖುದ್ದಾಗಿ ವಿಚಾರಣೆ ಮಾಡಿದ್ದಾರೆ. ಮೃತಳಾದ ಪ್ರೇಮ ಆನಂದಕುಮಾರಿಯವರ ಸಹಪಾಠಿಗಳಾದ 15 ನರ್ಸಿಂಗ್ ವಿದ್ಯಾರ್ಥಿನಿಯರನ್ನು ಈ ಬಗ್ಗೆ ವಿಚಾರಿಸ ಲಾಗಿದೆ. ಅವರೆಲ್ಲದ ಹೇಳಿಕೆಯ ಪ್ರಕಾರ 1-3-84ರ ಸಾಯಂಕಾಲ ಮೃತಳಾದ ಪ್ರೇಮ ಆನಂದ ಕುಮಾರಿ ತನ್ನ ರೂಮಿನಲ್ಲಿ ಹಾಸಿಗೆ ಮೇಲೆ ಪ್ರಜ್ಞಾ ಹೀನ ಸ್ಥಿತಿಯಲ್ಲಿ ಇದ್ದಳು. ಇದನ್ನು ನೋಡಿದ ತಕ್ಷಣ ಅವರು ಆಕೆಯನ್ನು ಅದೇ ದಿವಸ ಸಾಯಂಕಾಲ 7-30 ಘಂಟೆಗೆ ಸಿವಿಲ್ ಆಸ್ಪತ್ರೆಗೆ ಸೇರಿಸಿದರು. 2-3-84 ರಂದು ಪ್ರೇಮಳ ತಾಯಿಗೆ ಆಕೆಯ ಮಗಳ ಸ್ಥಿತಿ ಗಂಭೀರವಾಗಿದೆ ಎಂದು ಟೆಲಿಗ್ರಾಂ ಕಳು ಹಿಸಲಾಯಿತು. 4-3-84 ರಂದು ಸುಮಾರು 5 ಗಂಟೆ ಸಮಯದಲ್ಲಿ ಪ್ರೇಮ ಸತ್ತು ಹೋದಳೆಂದೂ ಆಕೆಯ ಸಾವಿನ ಬಗ್ಗೆ ತಮಗೆ ಯಾರಿಗೂ ಎಳ್ಳಷ್ಟೂ ಸಂಶಯವಿಲ್ಲವೆಂದೂ ಅವರು ಹೇಳಿದ್ದಾರೆ.

3. ವಿಚಾರಣೆಯಲ್ಲಿ ಕಂಡು ಬಂದ ಅಂಶಗಳು ಏನೆಂದರೆ ಮೃತ ಪ್ರೇಮ ಆನಂದ ಕುಮಾರಿ ಕಬ್ಬೂರಿನಲ್ಲಿ ನೀರಾವರಿ ಇಲಾಖೆಯಲ್ಲಿ ಮೊದಲನೇ ದರ್ಜೆ ಗುಮಾಸ್ತನಾಗಿರುವ ರವೀಂದ್ರ ವಿಠಲ್ ಜರ್‌ತಾರ್‌ಕರ್ ಎಂಬುವರೊಂದಿಗೆ ಪ್ರೇಮ ಸಂಬಂಧ ಇಟ್ಟುಕೊಂಡಿದ್ದಳೆಂದೂ, ಆಕೆಯ ತಾಯಿಯು ಹಿಡಕಲ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಇವರಿಬ್ಬರಿಗೂ ಪರಸ್ಪರ ಪರಿಚಯವಾಯಿತೆಂದೂ, ರವೀಂದ್ರನು ಹಿಡಕಲ್‌ಗೆ ಆಗಾಗ್ಗೆ ಹೋಗುತ್ತಿದ್ದನೆಂದೂ, ಮೃತಳು ನರ್ಸಿಂಗ್ ವಿದ್ಯಾರ್ಥಿನಿಯಾಗಿ ಬೆಳಗಾಂಗೆ ಬಂದ ಮೇಲೂ ಸಹ ಈ ಪ್ರಕರಣ ಮುಂದುವರಿಯಿತೆಂದೂ ತಿಳಿದು ಬಂದಿದೆ. ರವೀಂದ್ರನು ಆಕೆಯನ್ನು ಮದುವೆ ಆಗುತ್ತೇನೆಂದೂ ಹೇಳಿದ್ದನೆಂದೂ, ಶಾಲಾ ಮಾಸ್ತರು ಎಂ.ಎಸ್. ಬಟ್ಟಂಡೆ ಎಂಬಾತ ನೊಂದಿಗೆಪತ್ರ ವ್ಯವಹಾರ ನಡೆಸಿರುವುದನ್ನು ತಿಳಿದು, 20-2-84 ರಂದು ತಾನು ಮೃತಳನ್ನು ಮದುವೆ ಯಾಗುವುದಿಲ್ಲವೆಂದೂ, ತನ್ನ ತಂದೆ ತಾಯಿಗಳು ತನಗೆ ಬೇರೊಬ್ಬ ಕನ್ಯೆಯನ್ನು ಹುಡುಕುತ್ತಿರುವ ರೆಂದು ತಿಳಿಸಿದನೆಂದು ವರದಿಯಾಗಿದೆ. ರವೀಂದ್ರನ ಕಾಗದ ನೋಡಿ ಮೃತಳು ಬೆಳಗಾಂಗೆ ಬರಬೇಕೆಂದು ಒತ್ತಾಯ ಮಾಡಿ ಕಾಗದ ಬರೆದರೂ ಸಹ ಆತನು ಬೆಳಗಾಂಗೆ ಬರದೆ, ಪತ್ರವನ್ನೂ ಸಹ ಬರೆಯದೆ

ಇದ್ದುದರಿಂದ ಮೃತಳು ಹತಾಶಳಾಗಿ ನಿದ್ದೆ ಮಾಡುವ ಗುಳಿಗೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದು ಕೊಂಡಳೆಂದು ವರದಿಯಾಗಿದೆ. ಹೆಚ್ಚಿನ ಗುಳಿಗೆಗಳನ್ನು ಸೇವಿಸಿದ್ದರಿಂದ ಆಕೆಯು 1-3-84 ರಿಂದ 4-3-84ರವರೆಗೆ ಪ್ರಜ್ಞಾಹೀನಳಾಗಿದ್ದು ಚಿಕಿತ್ಸೆ ಕೊಟ್ಟರೆಂದು ಬಂದಿದೆ.

4. ಈ ಬಗ್ಗೆ ಸಿ.ಆರ್.ಪಿ.ಸಿ. 174ನೇ ಕಾಲಂ ಪ್ರಕಾರ ಕೇಸನ್ನು 23:84 ಎಂದು ನೊಂದಾಯಿಸಿಕೊಳ್ಳಲಾಗಿದೆ. ಮೃತಳ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಯಿತು. ಮರಣೋತ್ತರ ಪರೀಕ್ಷೆ ಕಾಲದಲ್ಲಿ ಹಾಗೂ ಇನ್‌ಕ್ವೆಸ್ಟ್ ಕಾಲದಲ್ಲಿ ಆಕೆಯ ದೇಹದ ಮೇಲೆ ಗಾಯಗಳಾಗಲೀ, ಅಥವಾ ಯಾವುದೇ ಒಂಸೆಗೆ ಒಳಗಾದ ಚಿನ್ನೆಗಳಾಗಲೀ ಕಂಡು ಬಂದಿಲ್ಲ. ಆಕೆಯ ವಿಸೆರಾವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿದೆ. ರಾಸಾಯನಿಕ ಪರೀಕ್ಷೆ ವರದಿ ಇನ್ನೂ ಬರದೆ ಇರುವುದರಿಂದ ವೈದ್ಯರು ಸಾವಿನ ಕಾರಣದ ಬಗ್ಗೆ ತಮ್ಮ ತೀರ್ಪನ್ನು ಕಾದಿರಿಸಿಟ್ಟಿದ್ದಾರೆ.

5. ಮೃತಳ ತಾಯಿ ಶ್ರೀಮತಿ ಪುಷ್ಪಾವತಿ ಮಾಡಿರುವ ಆಪಾದನೆಗಳು ನಿರಾಧಾರವಾದುವೆಂದೂ ಮತ್ತು ಮೃತಳು ತನ್ನ ಪ್ರೇಮ ಪ್ರಕರಣದಲ್ಲಿ ನಿರಾಶೆ ಹೊಂದಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದೂ ತಿಳಿದು ಬಂದಿದೆ.

(vi) ಸೀತಾರಾಮರಾವ್ ಎಂಬ ಪ್ರೈಮರಿ ಶಾಲಾ ಉಪಾಧ್ಯಾಯರು ಸೇವೆಯಲ್ಲಿರುವಾಗಲೆ ತೀರಿಕೊಂಡ ಕಾರಣ ಅವರ ಮಗಳಿಗೆ ನೌಕರಿ ಕೊಡುವ ಬಗ್ಗೆ.

ಶ್ರೀ ಬಿ. ಭೈರಪ್ಪಾಜಿ.—ಮಾನ್ಯ ಅಧ್ಯಕ್ಷರೇ, ಇದು ಮಾನವೀಯ ಪ್ರಶ್ನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಎರಡು ಮಾತಿನಲ್ಲಿ ಹೇಳುತ್ತೇನೆ. ಸೀತಾರಾಂರಾವ್ ಎಂಬುವರು ಪ್ರೈಮರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು 1964ನೇ ಇಸವಿಯಲ್ಲಿ ತೀರಿಕೊಂಡರು. ಅವರಿಗೆ ಮೂರು ಜನ ಮಕ್ಕಳಿದ್ದಾರೆ. ಸರ್ಕಾರಿ ನೌಕರರು ಕೆಲಸದಲ್ಲಿದ್ದು, ತೀರಿಕೊಂಡರೆ ಅವರ ಮಕ್ಕಳಿಗೆ ಕೆಲಸ ಕೊಡಬೇಕೆಂದು ಇರುವ ಸರ್ಕಾರಿ ಆಜ್ಞೆ ಪ್ರಕಾರ, ಮೇಲ್ಕಂಡ ಶಿಕ್ಷಕರ ಮಗಳಿಂದ ಎಲ್ಲಾ ಕಾಗದಪತ್ರಗಳನ್ನೂ ಸಂಬಂಧಪಟ್ಟವರು ತೆಗೆದುಕೊಂಡಿದ್ದಾರೆ. ಈಗ ಕೇಳಿದರೆ, ಕಳೆದುಹೋಗಿವೆಯೆಂದು ಹೇಳುತ್ತಿದ್ದಾರೆ. ಈಗ ಅವರ ಹತ್ತಿರ ಇರುವ ನಕಲುಗಳನ್ನು ತರಿಸಿಕೊಂಡು, ಪ್ರಾಪ್ತ ಹೆಣ್ಣು ಮಗಳಿಗೆ ಮತ್ತು ಅವರ ಸಂಸಾರಕ್ಕೆ ನೆರವಾಗುವುದಕ್ಕೆ ಮುಂದೆ ಬರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಇಲ್ಲ, ದಯಮಾಡಿ ಯಾರಾದರೂ ಮಂತ್ರಿಗಳು ವಿದ್ಯಾ ಇಲಾಖೆಯ ಮಂತ್ರಿಗಳಿಗೆ ಈ ವಿಚಾರವನ್ನು ತಿಳಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

(vii) ಕುಂದಾಪುರದಲ್ಲಿ ಸಿಡಿಲು ಮಳೆಯಿಂದ ಹಾನಿಗೊಳಗಾದವರಿಗೆ ಪರಿಹಾರ ಕೊಡುವ ಬಗ್ಗೆ.

ಶ್ರೀ ಪ್ರತಾಪಚಂದ್ರಶೆಟ್ಟಿ.—ತಾ 4-4-84ರಂದು ಕುಂದಾಪುರದಲ್ಲಿ ಗುಡುಗು, ಸಿಡಿಲು ಮಳೆಯಿಂದ ಸಂಪೂರ್ಣವಾಗಿ ಕಷ್ಟನಷ್ಟ ಅನುಭವಿಸಿದ ವ್ಯಕ್ತಿ, ಆ ಗ್ರಾಮದ ಪೂಜಾರಿ ಅವರು ಆಸ್ಪತ್ರೆಯಲ್ಲಿ 6-4-84ರಂದು ತೀರಿಕೊಂದರು. ಅವರ ಮನೆ ಸಿಡಿತಕ್ಕೆ ಸಿಕ್ಕಿ ಜರ್ಜರಿತವಾಗಿದೆ. ತೆಂಗಿನ ಮರಗಳು ಸಂಪೂರ್ಣವಾಗಿ ನಾಶವಾಗಿವೆ. ಮನೆಯಲ್ಲಿರುವ ಅಕ್ಕಿಯೂ ಸಹ ಹಾಳಾಗಿದೆ. ಅಧಿಕಾರಿಗಳು ಕೂಡ ಸಂದರ್ಶನ ಇತ್ತಿದ್ದಾರೆ. ಮತ್ತು ಸರ್ಕಾರದವರು ಈ ಬಗ್ಗೆ ನೊಂದ ಕುಟುಂಬಕ್ಕೆ ಕೂಡಲೇ ಪರಿಹಾರ ಕೊಡಬೇಕು ಮತ್ತು ಅವರ ಮನೆಯನ್ನು ಕಟ್ಟಿಸಿಕೊಡಲು ಸಹಕರಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಿ.ಎಲ್. ಪಾಟೀಲ್.—ಈ ಬಗ್ಗೆ ವಿಚಾರ ಮಾಡಿ ಸಾಧ್ಯವಾದರೆ ಸರ್ಕಾರ ಪ್ರಯತ್ನ ಮಾಡುತ್ತದೆ.